ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾದ ವೆಚ್ಚ ಮಾಡಿರುವ ಹಣ ಎಷ್ಟು ;

ಇ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ;

ಈ) ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಉ) ಸದರಿ ಕಾಮಗಾರಿಗಳ ಗುತ್ತಿಗೆದಾರರು ಯಾರು ಯಾರು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಮುಳವಾಡ ಏತ ನೀರಾವರಿ ಸ್ಕೀಂ 'ಎ' ಅಡಿ ನಿಗಧಿತ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯಿಂದ 30,850 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಅವಶ್ಯವಿರುವ ಹೆಡ್ ವರ್ಕ್ಸ್ ಹಾಗೂ ಕಾಲುವೆ ಜಾಲದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಸ್ಕೀಂ 'ಬಿ' ಅಡಿಯ ಯೋಜನೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಆ) ಮುಳವಾಡ ಏತ ನೀರಾವರಿ ಸ್ಕೀಂ 'ಎ' ಕಾಮಗಾರಿಗಳ ಅಂದಾಜು ವೆಚ್ಚ ರೂ. 271.00 ಕೋಟಿ ಹಾಗೂ ಡಿಸೆಂಬರ್ 2004 ಅಂತ್ಯಕ್ಕೆ ವೆಚ್ಚ ಮಾಡಲಾದ ಹಣ ರೂ. 152.00 ಕೋಟಿ.

ಇ) ಯೋಜನೆಯ ಮೊದಲನೇ ಮುಖ್ಯ ಸ್ಥಾವರ ಹಾಗೂ ಲೀಡ್ ಆಫ್ ಕೆನಾಲ್ ಕಾಮಗಾರಿ ಪೂರ್ಣಗೊಂಡಿರುತ್ತವೆ. ಎರಡನೇ ಮುಖ್ಯ ಸ್ಥಾವರದ ಪಂಪ್ ಅಳವಡಿಕೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಯೋಜನೆಯ 17.50 ಕಿ.ಮೀ. ಉದ್ದದ ಪೂರ್ವ ಕಾಲುವೆ ಪೂರ್ಣಗೊಂಡಿದ್ದು, ಅದರಡಿಯ 6 ವಿತರಣಾ ಕಾಲುವೆಗಳ ಪೈಕಿ 5 ಮುಕ್ತಾಯದ ಹಂತದಲ್ಲಿವೆ. 78 ಕಿ.ಮೀ. ಉದ್ದದ ಪಶ್ಚಿಮ ಕಾಲುವೆ ಮತ್ತು ಅದರಡಿಯ ವಿತರಣಾ ಕಾಲುವೆ 1 ರಿಂದ 11ರವರೆಗೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ವಿತರಣಾ ಕಾಲುವೆ 12 ರಿಂದ 42 ರವರೆಗೆ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ.

ಈ) ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2006ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಉ) ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರ ಪೆಸರುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

898(1541) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ದೊಡ್ಡ ಬೊಮ್ಮಸಂದ್ರ, ನಂಜಪ್ಪ ಸರ್ಕಲ್ ಹಾಗೂ ವಿದ್ಯಾರಣ್ಯಪುರಕ್ಕೆ ಹೋಗುವ ಬೆಂಗಳೂರಿನ ಮಹಾನಗರ ಸಾರಿಗೆ ಸಂಸ್ಥೆಯ ಸಾಯಂಕಾಲ ಬಸ್ಸುಗಳ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರದೇಶದ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಲು ಬಸ್ಸುಗಳ ಸಂಖ್ಯೆ ಹೆಚ್ಚಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

ಇ) ಪ್ರತಿದಿನ ಬೆಳಗ್ಗೆ ವಿದ್ಯಾರಣ್ಯಪುರದಿಂದ ವಿಧಾನಸೌಧಕ್ಕೆ ಇನ್ನೊಂದು ಬಸ್ ಸೇವೆಯನ್ನು ಒದಗಿಸಲಾಗುವುದೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಇಂಧನ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

899(1542) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದ ಮೇಲೆ ಆದಾಯ ಜಾಸ್ತಿ ಆಗಿದೆಯೇ :

ಆ) ಹಾಗಿದ್ದಲ್ಲಿ, ಜಾಸ್ತಿ ಆದಾಯ ಎಷ್ಟು (ಪಟ್ಟಣ ವ್ಯಾಪ್ತಿಯಲ್ಲಿರುವ ಸ್ಥಳೀಯ ಸಂಸ್ಥೆಗಳ ವಿವರ ನೀಡುವುದು):

ಇ) ಅಕ್ಟಾಯ್ ಸುಂಕ ರದ್ದಾದನಂತರ ಇದಕ್ಕೆ ಪರ್ಯಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಅನುದಾನವನ್ನು ಈಗ ನೀಡಲಾಗುತ್ತಿದೆಯೇ; ನೀಡಲಾಗುತ್ತಿದ್ದರೆ, ಇದರ ಮೊತ್ತ ಎಷ್ಟು :

ಈ) ಅಕ್ಟಾಯ್ ರದ್ದಾದ ನಂತರ ಇದಕ್ಕೆ ಪರ್ಯಾಯವಾಗಿ ಮಾರಾಟ ತೆರಿಗೆಯ ಮೇಲೆ ಸರ್‌ಚಾರ್ಜ್ ವಿಧಿಸಿ ಆ ಮೂಲಕ ವಸೂಲು ಮಾಡುತ್ತಿರುವ ಮೊತ್ತ ಎಷ್ಟು : ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿರುವ ಪಾಲು ಎಷ್ಟು :

ಉ) ಒಂದು ವೇಳೆ ಪರ್ಯಾಯ ಅನುದಾನ ನೀಡುತ್ತಿಲ್ಲವಾದಲ್ಲಿ ಈ ಹಣವನ್ನು ಯಾವ ಬಾಬ್ತಿಗೆ ವಿನಿಯೋಗಿರಸಲಾಗುತ್ತಿದೆ ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು) :

ಅ) ಹೌದು

ಆ) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ.50 ರಿಂದ 100 ರಷ್ಟು ಆದಾಯ ಹೆಚ್ಚುವರಿಯಾಗಿದೆ.

ಇ) ಹೌದು, 2004–05ರಲ್ಲಿ ರೂ. 797.06 ಕೋಟಿಗಳಷ್ಟು .

ಈ) ಮಾರಾಟ ತೆರಿಗೆ ಮೇಲೆ ಅಕ್ಟಾಯ್ ಪರ್ಯಾಯವಾಗಿ ಸರ್ ಚಾರ್ಜ್ ವಿಧಿಸುವ ವಿಷಯ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಒಟ್ಟಾರೆ ರಾಜ್ಯದ, ಆದಾಯದಲ್ಲಿ (NLGOR) ಶೇಕಡ 5.4 ರಷ್ಟು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

900(1477) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧಗಿ ತಾಲ್ಲೂಕಿನ ಚಿಮ್ಮಲಗಿ ಏತ ನೀರಾವರಿ ಯೋಜನೆಗೆ ಸರ್ಕಾರ ಮೀಸಲಿಟ್ಟ ಅನುದಾನವೆಷ್ಟು :